

ಕರಿಹೆಂಚಿನ ಸೂರು. ಆರ್ಭಟಾಗಿ ಬಿಸಿಲುಕೋಲು ನಿಧಾನ ಪಾರವ್ವಳ ಕೋಣೆಯಲ್ಲಿ ಇಳಿಬಿಟ್ಟಿತ್ತು. ಆಕೆ ವ್ಯಾಯಾಮ ನಿಲ್ಲಿಸಿದಳು. ತನಗ ತಾನೇ ಸ್ವಗತವಾಗಿ ಬಡಬಡಿಸಹತ್ತಿದಳು. ಸುತ್ತಲೂ ಮಂದ ಬೆಳಕಿತ್ತು. ಬಿದ್ದ ಬಿಸಿಲಕೋಲಿನ ಪ್ರತಿಫಲನಕ್ಕೆ ಪಾರವ್ವನ ಮುಖ ಪರದೆಯಂತಾಗಿತ್ತು. ಬಡಬಡಿಕೆಯ ಸ್ವಗತ ನಿಂತಿತು. ಬಿಸಿಲುಕೋಲಲಿ ಸಣ್ಣಗೆ ಹಬೆ ಆಡುತ್ತಿತ್ತು. ಅದು ಸಾವಕಾಶ ಸುತ್ತುತ್ತ ಸುರುಳಿಗೊಂಡಂತೆ ಅದರೊಳಗೆ ಹರೆಯದ ಪಾರವ್ವನ ರೂಪ ಸಿದ್ಧಗೊಂಡು ಮುದಿ ಪಾರವ್ವನಿಗೆ ಎದುರಾಗಿ ಉಗಿದಂಗೆ ಕಿಸ್ಸಕ್ಕನೇ ನಕ್ಕಿತು. ''ಈಗ ಹೆಂಗದಿ ಪಾರವ್ವ? ಹೇಲುಚ್ಚೆಗಳ ಸಾಮ್ರಾಜ್ಯದೊಳಗ! ನಿನ್ನ ನೋಡಿಕೊಳ್ಳಾವರು ಒಂದ ದಿನ ಬರದಿದ್ದರ ಸಾಕು. ಸಂಗ್ರಹ ಆಗತದ ದುರ್ನಾತದ ಸಾಮ್ರಾಜ್ಯ! ಅದ ನಿನ್ನ ಪೈಲೆದಿನಗಳು! ನೆನಪ ಮಾಡಿಕೊ! ಎಂಥ ಶೀಲಗಿತ್ತಿ ಇದ್ದಿ ಅಂದರ, ಜೈಂಯಾರು, ಹಾರೋರು ನಾಚಕೋಬೇಕು, ಹಾಂ! ಅಂಥಾ ಮಡಿಮೈಲಿಗಿ ಮಾಡತಿದ್ದಿ. ಸಂತಿಗಿ ಹೋಗಿ ಬಂದರ ಜಳಕಾ ಮಾಡೋದು. ಮಡಿ ಉಡುವುದು. ದೊಡ್ಡ ದವಾಖಾನಿಗಿ ಹೋಗಿ ಬಂದರ, ಬ್ಯಾರೆ ಊರಿಗಿ ಹೋಗಿ ಬಂದರ... ಹಿಂಗ ಎಲ್ಲಾ... ಈಗ?'' ಪಾರವ್ವನ ಮುಖ ಬಿಗಿದು ನರ ಉಬ್ಬಿದಂಗಾಗಿ ಸಿಡುಕಿ ಬೈದುಬಿಡತಾಳೆ. ಕೂಗುತಾಳೆ. ''ಹಾಂ... ನಾ ಶೀಲಾ ಮಾಡತಿದ್ನಿ. ಈಗಲೂ ಮಾಡತೀನಿ. ಬೇರೆಯವರನ್ನ ಮುಟ್ಟಿಸಿಕೋತಿದ್ದಿಲ್ಲ. ಕಾರಣ ಯಾರು? ನಾನ? ನಿಮ್ಮ ರೂಢಿಪರಂಪರೆ. ಹೌದು. ಈ ಊರಾಗಿನ ದ್ಯಾವರ ಕಡಕ್ ಅದಾನಂತ ಇದನ್ನ ತಂದವರ್ಯಾರು? ಇಚಾರ ಮಾಡು! ಬಂದಳವ್ವ ಹೇಳಾಕ ನನಗ...'' ನಿಧಾನ ಕೋಲಲ್ಲಿಯ ಪಾರವ್ವ ಮಾಯವಾಗುತ್ತಿದ್ದಳು. ಆದರೆ ಮಳೆ ನಿಂತ ಮೇಲೆ ಹನಿ ಉದುರಿದಂತೆ ಬಡಬಡಿಕೆ ಮಾತ್ರ ಇರುತ್ತಿತ್ತು.

ಒಮ್ಮೆ ಮಹಾದೇವನ ಮನೆಗೆ ಆತನ ಮಿತ್ರ ವಿವೇಕ ಬಂದಿದ್ದ. ಆತ ಆ ಶಹರದ ಕಾಲೇಜಿನಲ್ಲಿ ನಾಟಕ ಮಾಡಿಸುವವನಿದ್ದ. ಮಹಾದೇವನ ಯಾವುದೋ ಸಂದರ್ಭದ ಮಿತ್ರ. ಆಗ ಮಾತಿನ ಮಧ್ಯೆ ಪಾರವ್ವ ಆಡಿದ ನುಡಿ ರೂಪಕಾತ್ಮಕ ಚಾಟಿಯೇಟಿನಂತಿತ್ತು. ನಾಟಕದ ರಿಹರ್ಸಲ್‌ಗೆ ಬಂದವ ಆಕೆಯ ಭಾಷೆಯ ಬಳಕೆಯ ವಿಧಾನದ ಮೋಡಿಗೆ, ಸೊಗಡಿಗೆ ಮತ್ತದರ ಡೆಲಿವರಿಯ ಥ್ರೋಗೆ ದಂಗಾಗಿದ್ದ. ಒಂದು ರೌಂಡು ಪಾರವ್ವನನ್ನು ನಡೆದಾಡಿಸುವುದು ಮಹಾದೇವನ ನಿತ್ಯದ ಕಾಯಕ. ಅದನ್ನು ಮುಗಿಸಿ ಹೊರಡುವುದೆಂದು ತೀರ್ಮಾನಿಸಿದರು. ಅವತ್ತು ಹೆಜ್ಜೆ ಹಾಕುತ್ತಿದ್ದಾಗ ವಿವೇಕ ಮಾತಿಗಾಗಿ ''ಅವ್ವ ನಿಮಗ ಮಕ್ಕಳೆಷ್ಟು?'' ಕೇಳಿದ. ಆಕೆ ಶಕ್ತಿ ಒಟ್ಟುಗೂಡಿಸಿ ಕಷ್ಟಪಟ್ಟು ಹೆಜ್ಜೆಯೆತ್ತುತ್ತಿದ್ದಳು. ಥಾಮ್.. ಪೈಲೆ ಇಲ್ಲಿ ಕುಂದರತ್ಯಾನು... ಅಂದಳು. ಮತ್ತು ತನ್ನ ನಿತ್ಯದ ನಿರ್ದಿಷ್ಟ ಜಾಗೆಯಾದ ಕಟ್ಟೆತನಕ ಬಂದು ಅಲ್ಲಿ ಕೂತಳು. ಪಾರವ್ವ ಹಾಗೆ ತನ್ನ ನಿರ್ದಿಷ್ಟ ಜಾಗೆಗಾಗಿ ಒಮ್ಮೊಮ್ಮೆ ಹಟಮಾಡುತ್ತಿದ್ದಳು ಮತ್ತು ಕೂರುತ್ತಿದ್ದಳು. ಆಕೆ ಸೆರಗಿನ ಅಂಚಿಂದ ಮುಖದ ಮೇಲಿನ ಬೆವರು ಒರೆಸಿಕೊಂಡಳು. ಹಾಂ.. ಯಾನಂದಿ? ಮತ್ತೊಮ್ಮೆ ಖಾತ್ರಿಪಡಿಸಲೆಂಬಂತೆ ವಿಚಾರಿಸಿದಳು. ನಿಮಗ ಎಷ್ಟು ಮಕ್ಕಳು ಅಂತಂದೆ..? ವಿವೇಕ ಅಂದ. ತನ್ನ ಗಾಂವಟಿ ಮತ್ತು ನಾಟಕೀಯ ಧಾಟಿಯಲಿ ''ಅದಾವ ತಗೊಳಪ್ಪ... ಯಾನ್ ಮಾಡೋದು? ಸೀಮಿಗೊಂದ ಅಟಾಟಿ ಆಗಿ ಅದಾವು!'' ಒಂದ ಉಸಿರಿಗೆ ಹೇಳಿದಳು. ಆಕೆ ಅವನಿಂದ ಯಾವ ಪ್ರತಿಕ್ರಿಯೆಯನ್ನು ನಿರೀಕ್ಷಿಸಿರಲಿಲ್ಲ. ತನ್ನ ನೈಜ ಶೈಲಿಯಲ್ಲಿ ಮಾತನಾಡಿದ್ದಳು. ವಿವೇಕ ಒಮ್ಮೆಲೆ, ''ಏನ್ ಸಾರ್... ಯಾವ ಪ್ರೊಫೆಷನಲ್ ಅಕ್ಟರ್‍ರು ಹೀಗೆ ಡೈಲಾಗ್ ಹೇಳಾಕ ಸಾಧ್ಯಯಿಲ್ಲ. ಏನ್ ಗ್ರಾಫ್ ಸಾರ್ ಮತ್ತ ಅದೆಂಥ ಥ್ರೋ' ಎಂದು ಅಚ್ಚರಿಯಿಂದ ಅಂದ. 'ಆದರ ಸೀಮಿಗೊಂದ ಅಟಾಟಿ..!' ಮಾತ್ರ ತಿಳಿಲಿಲ್ಲ ಬಿಡ್ರಿ. ವಾಟ್ ಎ ಮೆಟಾಫರ್! ನೀವು ಹೇಳ್ರಿಲ' ಅಂದ. ವಿವೇಕನಿಗೆ ಸಿಗರೇಟ್ ಸೇದುವುದಿತ್ತು. ಪಾರವ್ವ ಕೆಲ ನಿಮಿಷ ವಿರಮಿಸುವವಳು. ಆ ನೆಪದಲ್ಲಿ ಇಬ್ಬರೂ ನಾಲ್ಕು ಹೆಜ್ಜೆ ಮುಂದೆ ಹೋದರು.

ಮಹಾದೇವ ತನ್ನ ಅರಿವಿನ ಪರೀಧಿಯೊಳಗೆ ಹೇಳಿದ. ''ಅಟಾಟಿ ಅಂದರ ಉಪದ್ರವ, ಅಡಚಣಿ, ತೊಂದರೆ ಅಥವಾ ಬಾಜೂಕು ಕುಟುಕೊ ಬಗಲ ಮುಳ್ಳ ಇದ್ದಿರಬಹುದು. ಇನ್ನ ಸೀಮಿಗೊಂದು ಅಂದರ... ನಾ ಈ ಶಹರದಾಗ ಸರಕಾರಿ ಕಚೇರಿಯ ಎಸ್.ಡಿ.ಎ. ಇನ್ನೊಬ್ಬ ಟೆಕ್ಸ್‌ಟೈಲ್ಸ್‌ನಲ್ಲಿರುವ ಸಹದೇವ ಈಚಲಕರಂಜಿಯೊಳಗ. ಮತ್ತೊಬ್ಬ ಹೈಸ್ಕೂಲಿನಲ್ಲಿ ಕಾರಕೂನ ನೌಕರಿಯಲ್ಲಿರುವ ರಾಜೀವ ಅಥಣಿ ಊರಾಗ. ಉಳಿದೊಬ್ಬ ಬೇಸಾಯ ಮಾಡಿಕೊಂಡಿರುವವ ಸಂಜೀವ ಊರಾಗ. ಒಬ್ಬ ಸೋದರಿ ದೇವಕಿ. ಇವು ಸೀಮಿಗೊಂದ ಅದಾವು. ಅಡಚಣಿ ಆಗ್ಯಾವು ಹೊರತ ತನಗ ಬೇಕಾದಾಗ ಸಿಗುವವು ಅಲ್ಲಂತ ಒಂದರ್ಥಾಇರಬೋದು... ಇನ್ನೊಂದು ಪಂಚರು ಸೇರಿ ಹೊಲಮನಿ ಪಾಲಾ ಮಾಡಿದರು. ಅದರೊಳಗ ಛಲೋದನ್ನ ತಗೊಳ್ಳುವಾಗ ತೋರಿದ ಆಸೆ ಆಸಕ್ತಿ ಒಂದು ಅಟಾಟಿ ಆಗಿರಬೋದು''. ಮಹಾದೇವ ತನ್ನ ತಿಳುವಳಿಕೆಗೆ ದಕ್ಕಿದಂತೆ ಊಹಿಸಿ ಆ ಮಾತಿನ ಆಯಾಮಗಳನ್ನು ವಿವರಿಸಿದ. ಮಹಾದೇವನಿಗೆ ಪಾಲುಮಾಡಿದ ದಿನಗಳು ನೆನಪಾಗಹತ್ತಿದವು. ಕಟ್ಟೆಯ ಮೇಲೆ ಕುಳಿತ ಪಾರವ್ವ ಕರೆದ ಧ್ವನಿಯು ಆತನ ಸ್ಮೃತಿಯಲ್ಲಿ ಮಿಳಿತಗೊಂಡಿತು.

***

ಇಪ್ಪತ್ತೈದು ಮಳೆಗಳ ಮಹಾಪೂರ ದೂಧಗಂಗಾ ನದಿಯಲ್ಲಿ ಹರಿದಿತ್ತು. ಅಂದು ಮಹಾದೇವನ ಅಪ್ಪ ರುದ್ರಪ್ಪ ಮತ್ತು ಪಾರವ್ವ ತಾವು ಬದುಕಿದ್ದಾಗಲೇ ಹೊಲಮನಿ ಪಾಲಾ ಮಾಡುವ ವಿಚಾರದಿಂದ ಪಂಚರ ಬೈಠಕ್ ಸೇರಿಸಿದರು. ಮಹಾದೇವನಿಗೆ ಇದು ಹೀಗೆ ಅಚಾನಕಾಗಿ ಯಾಕೆ ಅವರಿಗೆ ಹೊಳೆಯಿತು ಎನ್ನುವುದು ಇವತ್ತಿಗೂ ಹೊಳೀಲಾರದ ಒಗಟಿನಂತೆ ಆಗಿದೆ. ಇಬ್ಬರೂ ನಡುವಯಸ್ಸು ದಾಟಿದರೂ ಗಟ್ಟಿಮುಟ್ಟಾಗಿದ್ದರು. ಅಂದಿನ ಕಾಲ ಅಗ್ಗದ ಸುಖಾಲ. ದೂಧಗಂಗಾ ಪರಿಸರದ ಜಮೀನು ಬಹು ಫಲವತ್ತಾದುದು. ಹಾಲಿನಮೇಲಿನ ಕೆನೆಯಂತೆ! ಆಗ ಎಕರೆಗೆ ಎರಡುಲಕ್ಷ ಬೆಲೆ. ಈಗ ಕೇಳುವುದೇ ಬೇಡ. ಮೂವತ್ತು ಲಕ್ಷ ಹತ್ತಿರದ ಬೆಲೆ. ಹಿರಿಯರ ಮನೆ ಮತ್ತು ಹನ್ನೆರಡು ಎಕರೆ ಹೊಲ, ಚೂರುಪಾರು ಚಿನ್ನ ಬೆಳ್ಳಿ. ಇವಿಷ್ಟು ಪಾಲಾಗುವ ವಸ್ತುಗಳು. ಪಂಚರಾಗಿ ಬಾಬುಅಣ್ಣಾ ಹಾಗು ಸದೂಕಾಕಾ ಬಂದಿದ್ದರು. ಬಾಬುಅಣ್ಣ ಹಳೇತಲೆಮಾರಿನ ಕಾಂಗ್ರೆಸ್ ಪುಢಾರಿ. ಸದುಕಾಕಾ ಊರು ಉಸಾಬರಿಗೆ ಹೆಸರಾದ ಕುಳ. ಗರಿಗರಿ ಗಾಂಧಿ ಟೊಪ್ಪಿಗೆ ಬಿಳಿಅಂಗಿ ಮತ್ತು